# DISCIPLINARY PROCEEDINGS AGAINST RETIRED GOVERNMENT SERVANTS

| Sl.No | Date | Type | File No | Subject |
|---|---|---|---|---|
| 1. | 14/16.9.1967 | Letter | GAD 54 SRR 67 | Continuance of Departmental Proceedings after retirement, Application of new Rule 214 of Mysore Civil Services Rules. |
| 2. | 3.1.1968 | | FD 133 SRS 67 | Withholding/withdrawal of pension under Rule 214 of the Mysore Civil Services Rules. |
| 3. | 16.08.1983 | | ಡಿಪಿಎಆರ್ 41 ಎಸ್ ಡಿಇ 83 | ಒಂದು ವರ್ಷದ ಅವಧಿಯೊಳಗೆ ನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರ ವಿರುದ್ಧ ನಡೆಯುತ್ತಿರುವ ಇಲಾಖಾ ತನಿಖೆಗಳು-ಇವುಗಳ ಶೀಘ್ರ ವಿಲೇವಾರಿಗೆ ಸೂಚನೆಗಳು |
| 4. | 24.05.1984 | Official Memorandum | ಡಿಪಿಎಆರ್ 33 ಎಸ್ ಡಿಇ 1983 | ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957-ನಿವೃತ್ತಿ ಆಗಲಿರುವ ಸರ್ಕಾರಿ ನೌಕರರ ಮೇಲೆ ಇರುವ ಇಲಾಖಾ ತನಿಖೆಗಳನ್ನು ಪೂರ್ಣಗೊಳಿಸುವ ಬಗ್ಗೆ |
| 5. | 21.01.2019 | Circular | ಸಿಆಸುಇ 76 ಸೇಇವಿ 2018 | ಸರ್ಕಾರಿ ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತುಕ್ರಮ/ಇಲಾಖಾ ವಿಚಾರಣೆಯ ಅವಶ್ಯಕ ಪರಿಪೂರ್ಣ ಪ್ರಸ್ತಾವನೆಗಳನ್ನು ವಿಳಂಬವಿಲ್ಲದೇ ಸಲ್ಲಿಸುವ ಬಗ್ಗೆ ಮರು ಸೂಚನೆಗಳು |
| 6. | 09.10.2000 | Official Memorandum | ಡಿಪಿಎಆರ್ 13 ಸೇಇವಿ 2000, | ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗ ಶಿಸ್ತಿನ ನಡುವಳಿಕೆಗಳನ್ನು ಪ್ರಾರಂಭಿಸಿ ಅವರು ನಿವೃತ್ತರಾದ ನಂತರ ದಂಡನೆ ವಿಧಿಸುವ ಪ್ರಕರಣಗಳನ್ನು ತಡೆಯುವ ಬಗ್ಗೆ |

**Copy of letter No.GAD 54 SRR 67, dated 14/16th September 1967 from the Chief Secretary to the Government of Mysore, Bangalore, addressed to the State Vigilance Commissioner, Bangalore.**

**Sub:-** Continuance of Departmental Proceedings after retirement - Application of new Rule 214 of M.C.S. Rules.

*****

With reference to your note bearing No.ADM.1996-120/ 66-67 dated 28th March 1967, on the above subject, I am directed to state that the matter has been got examined and it is clarified that disciplinary proceedings under C.C.A. Rules cannot be continued after the retirement of an officer, but that such proceedings may be continued or initiated as departmental proceedings under Rule 214 of Mysore Civil Service Rules, if circumstances of the case satisfy the conditions of this Rule.

2. In a case, therefore, where disciplinary proceedings have been started prior to the retirement of the officer or during re-employment and if such proceedings were to be continued as departmental proceedings after retirement or final retirement, as the case may be, it would be necessary to make an order that the proceedings shall be continued as departmental proceedings for purposes of Rule 214 after the retirement of the officer.

sd/-
**R.Thippoji Rao,**
Deputy Secretary to Government,
General Adminstration Department
(Services).

**GOVERNMENT OF MYSORE**
**(FINANCE DEPARTMENT)**

O.M.No.FD 133 SRS 67 dated 3rd January 1968

**OFFICIAL MEMORANDUM**

**Sub:-** Withholding/Withdrawal of Pension under Rule 214 of the Mysore Civil Services Rules Issues clarifications reg.-

*****

According to proviso (a) of Rule 214 of the Mysore Civil Services Rules, departmental proceedings, if instituted while the officer was in service, whether before his retirement or during his re-employment, shall, after the final retirement of the officer, be deemed to be proceedings under the said Rule and shall be continued and concluded by the authority by which it was commenced in the same manner as if the officer had continued in service. A question has been raised whether in the case of an officer whose case falls within the purview of the aforesaid proviso and proceedings against whom were instituted by an authority subordinate to the Governor, order for withdrawal/withholding of pension can be passed by the subordinate authority on the conclusion of the proceedings or that authority should refer the case to the Governor for final orders. The matter has been considered and the undersigned is directed to clarify that the function of the Disciplinary Authority is only to reach a finding on the charges and to submit a report recording its findings to Government. It is then for the Government to consider the findings and take a final decision under Rule 214 of the Mysore Civil Services Rules. In case Govt. decide to take action under Rule 214 of M.C.S.Rules in the light of the findings of the Disciplinary Authority, the Government will serve the person concerned with a show-cause notice within such time as may be specified by the Government. The Government will consider the reply and consult the Mysore Public Service Commission. If as a result of such consideration in consultation with the Commission, it is decided to pass an order under Rule 214 of M.C.S. Rs. necessary orders will be issued in the name of the Governor.

The procedure outlines in the preceding paragraph in regard to the issue of show-cause notice will also apply to a case where the Governor functions as the Disciplinary Authority.

sd/-
**C.N.Subba Rao,**
Special Officer,
Finance Department (Pensions).

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 41 ಎಸ್‌ಡಿಇ 1983

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:16.08.1983.

## ಅಧಿಕೃತ ಜ್ಞಾಪನ

**ವಿಷಯ:** ಒಂದು ವರ್ಷದ ಅವಧಿಯೊಳಗೆ ನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರ ವಿರುದ್ಧ ನಡೆಯುತ್ತಿರುವ ಇಲಾಖಾ ತನಿಖೆಗಳು-ಇವುಗಳ ಶೀಘ್ರ ವಿಲೇವಾರಿಗೆ ಸೂಚನೆಗಳು

*****

ಸರ್ಕಾರಕ್ಕೆ ಆರ್ಥಿಕ ಹಾನಿ ತರುವ ಆಪಾದನೆಯನ್ನು ಹೊರತುಪಡಿಸಿ, ಉಳಿದ ಆಪಾದನೆಗಳ ಬಗ್ಗೆ ಸರ್ಕಾರಿ ನೌಕರರ ವಿರುದ್ಧ ಹೂಡಿರುವ ಇಲಾಖಾ ತನಿಖೆಗಳನ್ನು ಕೈಬಿಡುವಂತೆ ಅನೇಕ ಪ್ರಸ್ತಾವನೆಗಳು ಇತ್ತೀಚೆಗೆ ಸರ್ಕಾರಕ್ಕೆ ಬರುತ್ತಲಿವೆ. ಇದಕ್ಕೆ ಕಾರಣ, ಇಂತಹ ತನಿಖೆಗಳನ್ನು ತಪ್ಪು ಹೊರಿಸಲ್ಪಟ್ಟ ಸರ್ಕಾರಿ ಅಧಿಕಾರಿಗಳು ನಿವೃತ್ತರಾಗುವ ಮೊದಲೇ ಮುಕ್ತಾಯಗೊಳಿಸಲು ಸಾಧ್ಯವಾಗದಿದ್ದುದು ಮತ್ತು ಅಂತಹ ತನಿಖೆಗಳನ್ನು ಸರ್ಕಾರಿ ನೌಕರನು ನಿವೃತ್ತಿ ಹೊಂದಿದ ಮೇಲೆ ಮುಂದುವರೆಸಲು ನಿಯಮಗಳಲ್ಲಿ ಅವಕಾಶವಿಲ್ಲದೇ ಇದ್ದುದ್ದು, ಆಗಿರುತ್ತದೆ. ಆದುದರಿಂದ ಇಂತಹ ಪ್ರಕರಣಗಳಲ್ಲಿ ಕಾಲಮಿತಿಯೊಳಗೆ ವಿಷಯಗಳನ್ನು ಸಂಗ್ರಹಿಸಿ, ಅವುಗಳನ್ನು ಪುನರ್ ವಿಮರ್ಶಿಸಿ ಶೀಘ್ರ ಕ್ರಮ ತೆಗೆದುಕೊಳ್ಳುವುದು ಅತ್ಯವಶ್ಯಕ.

2.ಆದುದರಿಂದ ಎಲ್ಲಾ ಶಿಸ್ತು ಪಾಲನಾ ಪ್ರಾಧಿಕಾರಿಗಳು (ಡಿಸಿಪ್ಲಿನರಿ ಅಥಾರಿಟೀಸ್) ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಒಂದು ಮಾಸಿಕ ವಿವರಣೆ ಪಟ್ಟಿಯನ್ನು ತಯಾರಿಸಿ ಅದನ್ನು ಮುಂದಿನ ತಿಂಗಳ 05ನೇ ದಿನಾಂಕದ ಒಳಗಾಗಿ ಈ ಕೆಳಗೆ ಸೂಚಿಸಿದ ಅಧಿಕಾರಿಗಳಿಗೆ ಕಳುಹಿಸಿಕೊಡತಕ್ಕದ್ದು.

| | |
|---|---|
| ಗ್ರೂಪ್ "ಸಿ" ಮತ್ತು ಗ್ರೂಪ್ "ಡಿ" ವರ್ಗಕ್ಕೆ ಸೇರಿರುವ ನೌಕರರಿಗೆ ಸಂಬಂಧಪಟ್ಟ ವಿವರಣಾ ಪಟ್ಟಿ | ಇಲಾಖಾ ಮುಖ್ಯಾಧಿಕಾರಿಗಳಿಗೆ |
| ಗ್ರೂಪ್ "ಬಿ" ವರ್ಗಕ್ಕೆ ಸೇರಿರುವ ನೌಕರರಿಗೆ ಸಂಬಂಧಪಟ್ಟ ಆಡಳಿತ ಸಂಬಂಧಪಟ್ಟ ವಿವರಣಾ ಪಟ್ಟಿ | ಕಾರ್ಯದರ್ಶಿಗಳಿಗೆ |

ಇಲಾಖಾ ಮುಖ್ಯಾಧಿಕಾರಿಗಳು ತಾವೇ ಪ್ರಾರಂಭಿಸಿರುವ ತನಿಖಾ ಪ್ರಕರಣಗಳನ್ನು ಈ ಮಾಸಿಕ ವಿವರಣಾ ಪಟ್ಟಿಯಲ್ಲಿ ಸೇರಿಸಿ ಅಂತಹ ಎಲ್ಲಾ ಪ್ರಕರಣಗಳನ್ನು ಪುನರ್ ವಿಮರ್ಶಿಸಿ, ಇಲಾಖಾ ತನಿಖೆಯನ್ನು ಎದುರಿಸುತ್ತಿರುವ ಸರ್ಕಾರಿ ನೌಕರರು ನಿವೃತ್ತರಾಗುವ ಮೊದಲೇ ಅವರ ವಿರುದ್ಧ ನಡೆಯುತ್ತಿರುವ ಇಲಾಖಾ ತನಿಖೆಗಳನ್ನು ಪೂರ್ಣಗೊಳಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರ್ಕಾರವು ಆದೇಶಿಸುತ್ತದೆ.

ಅಂತೆಯೇ ಸಚಿವಾಲಯದ ಎಲ್ಲಾ ಇಲಾಖಾ ಕಾರ್ಯದರ್ಶಿಗಳು ಗ್ರೂಪ್ 'ಎ" ಮತ್ತು ಗ್ರೂಪ್ "ಬಿ" ಅಧಿಕಾರಿಗಳಿಗೆ ಸಂಬಂಧಪಟ್ಟ ಅಂತಹ ಎಲ್ಲಾ ಇಲಾಖಾ ತನಿಖೆಗಳ ಪ್ರಕರಣಗಳನ್ನು ಕೂಡ ಪುನರ್ ವಿಮರ್ಶಿಸಿ, ನೌಕರರು ನಿವೃತ್ತಿ ಹೊಂದುವ ಮೊದಲೇ ತನಿಖೆಗಳನ್ನು ಪೂರ್ಣಗೊಳಿಸುವಂತೆ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

ಇಲಾಖಾ ಮುಖ್ಯಾಧಿಕಾರಿಗಳು ಈ ಆದೇಶವನ್ನು ಎಲ್ಲಾ ಶಿಸ್ತು ಪರಿಪಾಲನ ಪ್ರಾಧಿಕಾರಿಗಳ ಗಮನಕ್ಕೆ ತರತಕ್ಕದ್ದು.

**ಸಹಿ/-**
ಮೈ.ಕೃ.ವೆಂಕಟೇಶನ್,
ಅಪರ ಮುಖ್ಯ ಕಾರ್ಯದರ್ಶಿ

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 33 ಎಸ್‌ಡಿಇ 1983

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು,ದಿನಾಂಕ: 24.05.1984

**ಅಧಿಕೃತ ಜ್ಞಾಪನ**

ವಿಷಯ: ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿವೃತ್ತಿ ಆಗಲಿರುವ ಸರ್ಕಾರಿ ನೌಕರರ ಮೇಲೆ ಇರುವ ಇಲಾಖಾ ತನಿಖೆಗಳನ್ನು ಪೂರ್ಣಗೊಳಿಸುವ ಬಗ್ಗೆ.

*****

ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ಅವನ ಮೇಲೆ ಹೂಡಿದ ಯಾವುದೇ ಇಲಾಖಾ ತನಿಖೆಗಳನ್ನು ಅವನು ಸೇವೆಯಿಂದ ನಿವೃತ್ತಿಯಾದ ನಂತರ ಕರ್ನಾಟಕ ಸೇವಾ ನಿಯಮಾವಳಿಗಳ 214(ಎ) ನಿಯಮಕ್ಕೆ ಒಳಪಟ್ಟವುಗಳನ್ನಲ್ಲದೇ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರಲ್ಲಿರುವ ನಿಯಮಗಳ ಪ್ರಕಾರ ಮುಂದುವರೆಸುವುದಕ್ಕೆ ಅವಕಾಶವಿರುವುದಿಲ್ಲ. ಕಾರಣ ಈ ನಿಯಮಗಳು ಅವರಿಗೆ ಅನ್ವಯಿಸುವುದಿಲ್ಲ.

2. ಸರ್ಕಾರಿ ನೌಕರನು ನಿವೃತ್ತಿಯಾದ ನಂತರ ಅವನ ಮೇಲೆ ಹೂಡಲಾಗಿದ್ದ ಇಲಾಖಾ ತನಿಖೆಗಳನ್ನು ಸರ್ಕಾರಕ್ಕೆ ಆರ್ಥಿಕ ಹಾನಿ ಉಂಟಾಗಿಲ್ಲವೆಂಬ ಕಾರಣದ ಮೇಲೆ ಹಿಂದಕ್ಕೆ ತೆಗೆದುಕೊಳ್ಳುವ ಪ್ರಸ್ತಾವನೆಗಳು ಸರ್ಕಾರಕ್ಕೆ ಬರುತ್ತಿವೆ.

3. ಇತ್ಯರ್ಥವಾಗದೆ ಉಳಿದಿರುವ ಇಲಾಖಾ ತನಿಖೆಗಳನ್ನು ಪೂರ್ತಿಗೊಳಿಸುವ ಬಗ್ಗೆ ಹಾಗೂ ಇಂತಹ ಪ್ರಕರಣಗಳಲ್ಲಿ ಆಗುವ ವಿಳಂಬವನ್ನು ಗಮನಿಸಲು ಒಂದು ಮಾಸಿಕ ವಿವರಣಾ ಪಟ್ಟಿಯನ್ನು ನಮೂದಿಸಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಡಿಪಿಎಆರ್ 41 ಎಸ್‌ಡಿಇ 1983, ದಿನಾಂಕ; 16.08.1983ರಲ್ಲಿ ಸೂಚನೆಗಳನ್ನು ಕೊಡಲಾಗಿದೆ.

4. ಇಲಾಖಾ ಮುಖ್ಯಸ್ಥರು ಮತ್ತು ಸರ್ಕಾರದ ಕಾರ್ಯದರ್ಶಿಗಳು ಈ ಅಧಿಕೃತ ಜ್ಞಾಪನ ದಲ್ಲಿರುವಂತೆ ಕಾಲಕಾಲಕ್ಕೆ ಕ್ರಮ ತೆಗೆದುಕೊಂಡ ಪಕ್ಷದಲ್ಲಿ ಇಂತಹ ಪ್ರಕರಣಗಳು ಉದ್ಭವಿಸುವ ಪ್ರಮೇಯವು ಒದಗಿಬರುವುದಿಲ್ಲ.

5. ಆದುದರಿಂದ ದಿನಾಂಕ: 16.08.1983ರ ಅಧಿಕೃತ ಜ್ಞಾಪನ ದಲ್ಲಿ ಸೂಚಿಸಿರುವ ಸೂಚನೆಗಳನ್ನು ಅನುಸರಿಸಿ ನಿವೃತ್ತಿ ಆಗುವಂತಹ ಸರ್ಕಾರಿ ನೌಕರರ ಮೇಲೆ ಹೂಡಲಾಗಿರುವ ಇಲಾಖಾ ತನಿಖೆಗಳನ್ನು ಅವರು ನಿವೃತ್ತಿ ಆಗುವುದಕ್ಕೆ ಮುಂಚೆ ಇತ್ಯರ್ಥ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಇಲಾಖಾ ಮುಖ್ಯಸ್ಥರಿಗೆ ಮತ್ತು ಸರ್ಕಾರದ ಕಾರ್ಯದರ್ಶಿಗಳಿಗೆ ಈ ಮೂಲಕ ಸೂಚಿಸಲಾಗಿದೆ. ಇಂತಹ ಪ್ರಕರಣಗಳು ಇನ್ನು ಮುಂದೆ ಸರ್ಕಾರದ ಗಮನಕ್ಕೆ ಬಂದರೆ ಅದನ್ನು ತೀವ್ರವಾಗಿ ಪರಿಗಣಿಸಲಾಗುವುದೆಂದೂ ಸಹ ಈ ಮೂಲಕ ತಿಳಿಸಲಾಗಿದೆ.

**ಸಹಿ/-**
**ಎಂ.ಎಂ.ನಾಯ್ಕ್,**
ಉಪ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 13 ಸೇಇವಿ 2000 ಕರ್ನಾಟಕ ಸರ್ಕಾರದ ಸಚಿವಾಲಯ

ವಿಧಾನಸೌಧ,

ಬೆಂಗಳೂರು, ದಿನಾಂಕ: 9.10.2000

**ಅಧಿಕೃತ ಜ್ಞಾಪನ**

ವಿಷಯ: ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗಲೇ ಶಿಸ್ತಿನ ನಡವಳಿಗಳನ್ನು ಪ್ರಾರಂಭಿಸಿ, ಅವರು ನಿವೃತ್ತರಾದ ನಂತರ ದಂಡನೆ ವಿಧಿಸುವ ಪ್ರಕರಣಗಳನ್ನು ತಡೆಯುವ ಬಗ್ಗೆ.

ಉಲ್ಲೇಖ: 1) ದಿನಾಂಕ:31.5.1997ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 14 ಸೇಇವಿ 96.
2) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗರವರ ದಿನಾಂಕ:4.8.2000ರ ಪತ್ರ ಸಂಖ್ಯೆ: ಪಿಎಸ್ ಸಿ 201 ಸಿಎನ್ ಎಸ್ 99.

******

ಶಿಸ್ತಿನ ನಡವಳಿಗಳನ್ನು ಆರಂಭಿಸುವುದರಲ್ಲಿ, ನಡೆಸುವುದರಲ್ಲಿ ಹಾಗೂ ಅಂತಿಮಗೊಳಿಸುವುದರಲ್ಲಿ ವಿಳಂಬವನ್ನು ತಡೆಗಟ್ಟುವ, ಬಾಕಿ ಇರುವ ಶಿಸ್ತಿನ ಪ್ರಕರಣಗಳ ಪ್ರಗತಿಯನ್ನು ಪುನರ್ ಅವಲೋಕಿಸುವ ಹಾಗೂ ಅವುಗಳ ಉಸ್ತುವಾರಿ ಬಗ್ಗೆ ಮೇಲೆ (1) ರಲ್ಲಿ ಉಲ್ಲೇಖಿಸಿದ ದಿನಾಂಕ: 31.5.1997ರ ಅಧಿಕೃತ ಜ್ಞಾಪನದಲ್ಲಿ ಸೂಚನೆಗಳನ್ನು ನೀಡಲಾಗಿದೆ.

2. ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅಡಿಯ ಒಬ್ಬ ಸರ್ಕಾರಿ ನೌಕರನ ಮೇಲೆ ಹೂಡಲಾದ ಶಿಸ್ತಿನ ಪ್ರಕರಣ ಒಂದರಲ್ಲಿ ದಂಡನೆಯನ್ನು ವಿಧಿಸುವ ಕುರಿತು ಕರ್ನಾಟಕ ಲೋಕಸೇವಾ ಆಯೋಗದೊಂದಿಗೆ ಸಂಬಂಧಿಸಿದ ಇಲಾಖೆ ಸಮಾಲೋಚಿಸಿದಾಗ, ಆಯೋಗವು, ಮೇಲೆ (2) ರಲ್ಲಿ ಉಲ್ಲೇಖಿಸಿದ ದಿನಾಂಕ: 4.8.2000ರ ತನ್ನ ಪತ್ರದಲ್ಲಿ ಈ ಕೆಳಗೆ ಉದ್ಧರಿಸಿದಂತೆ ಅಭಿಪ್ರಾಯ ವ್ಯಕ್ತಪಡಿಸಿದೆ:-

> “ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಇಲಾಖೆಯು ದಿನಾಂಕ: 19.2.2000ದ ಪತ್ರ ಸಂಖ್ಯೆ: ಕೃತೋಇ 53 ಕೃಪವಿ 89 ರಲ್ಲಿ ಶಿಸ್ತು ಪ್ರಕರಣವೊಂದರಲ್ಲಿ ಆರೋಪಿತರ ವಿರುದ್ಧದ 1987-88ನೇ ಸಾಲಿನ ಆರೋಪಗಳ ಬಗ್ಗೆ ಆಪಾದಿತ ನೌಕರರು ದಿನಾಂಕ: 31.1.94 ರಂದು ನಿವೃತ್ತಿಯಾಗುವವರೆಗೂ ತಡೆದು ನಂತರ 1996ನೇ ಸಾಲಿನಲ್ಲಿ ಇಲಾಖಾ ವಿಚಾರಣೆ ಪ್ರಾರಂಭಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ 214 ರನ್ವಯ ದಂಡನೆ ವಿಧಿಸುವ ಬಗ್ಗೆ ಆಯೋಗದ ಸಹಮತಿಯನ್ನು ಕೋರಿದೆ. ಇತ್ತೀಚೆಗೆ ಈ ರೀತಿಯ ಹಲವಾರು ಪ್ರಕರಣಗಳು ಆಯೋಗದ ಅಭಿಪ್ರಾಯಕ್ಕಾಗಿ ಸ್ವೀಕೃತವಾಗಿದ್ದು ಇಂತಹ ಪ್ರಕರಣಗಳಲ್ಲಿ ದಂಡನೆ ವಿಧಿಸುವ ಉಪಯುಕ್ತತೆಯ ಬಗ್ಗೆ ತೀವ್ರ ಚಿಂತನೆ ಅಗತ್ಯವಿದೆ ಎಂದು ಆಯೋಗವು ಭಾವಿಸಿದೆ.
>
> ಈ ಹಿನ್ನೆಲೆಯಲ್ಲಿ, ಶಿಸ್ತು ಪ್ರಕರಣಗಳಲ್ಲಿ ಆಪಾದಿತರ ವಿರುದ್ಧ ತೀವ್ರತರವಾದ ಆರೋಪಗಳಿದ್ದು, ಅವರುಗಳು ಸರ್ಕಾರಿ ಸೇವೆಯಿಂದ ನಿವೃತ್ತರಾಗುವವರೆವಿಗೂ ದಂಡನೆ ವಿಧಿಸದೆ ನಿರಾತಂಕವಾಗಿ ಬಿಟ್ಟ ನಂತರ ದಂಡನೆ ವಿಧಿಸುವ ಪರಿಪಾಠವನ್ನು ಇನ್ನು ಮುಂದಾದರೂ ತಡೆಯುವುದು ಸಮಂಜಸವೆಂದು ಆಯೋಗವು ಅಭಿಪ್ರಾಯಪಟ್ಟಿದೆ. ಈ ಬಗ್ಗೆ ಸರ್ಕಾರದ ಎಲ್ಲಾ ಇಲಾಖೆ ಕಾರ್ಯದರ್ಶಿ: ಮುಖ್ಯಸ್ಥರಿಗೆ ಸೂಕ್ತ ನಿರ್ದೇಶನಗಳನ್ನು ಹೊರಡಿಸಬೇಕೆಂದು ವಿನಂತಿಸಲು ನಿರ್ದೇಶಿತನಾಗಿದ್ದೇನೆ.”

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗದ ಅಭಿಪ್ರಾಯವನ್ನು ಗಮನಿಸಲು ಹಾಗೂ ಅದರಲ್ಲಿ ಉಲ್ಲೇಖಿಸಿದಂತಹ ಪ್ರಕರಣಗಳು ಉದ್ಭವಿಸದಂತೆ ನೋಡಿಕೊಳ್ಳಲು ಸೂಚಿಸಿದೆ.

**ಕೆ. ಎಲ್ ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
(ಸೇವಾ ನಿಯಮಗಳು)

**ಕರ್ನಾಟಕಸರ್ಕಾರ**

ಸಂಖ್ಯೆ:ಸಿಆಸುಇ 76 ಸೇಇವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 21.01.2019

**ಸುತ್ತೋಲೆ**

ವಿಷಯ: ಸರ್ಕಾರಿ ಅಧಿಕಾರಿ /ನೌಕರರುಗಳ ವಿರುದ್ದ ಶಿಸ್ತು ಕ್ರಮ/ ಇಲಾಖಾ ವಿಚಾರಣೆಯ ಅವಶ್ಯಕ ಪರಿಪೂರ್ಣ ಪ್ರಸ್ತಾವನೆಗಳನ್ನು ವಿಳಂಬವಿಲ್ಲದೇ ಸಲ್ಲಿಸುವ ಬಗ್ಗೆ ಮರು ಸೂಚನೆಗಳು.

ಉಲ್ಲೇಖ:
1. ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 41 ಎಸ್‌ಡಿಇ 83, ದಿನಾಂಕ:16.08.1983.
2. ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 33 ಎಸ್‌ಡಿಇ 83, ದಿನಾಂಕ:24.05.1984.
3. ಸುತ್ತೋಲೆ ಸಂಖ್ಯೆ: ಸಿಆಸುಇ 7 ಸೇಇವಿ 96, ದಿನಾಂಕ:04.07.1996.
4. ಸುತ್ತೋಲೆ ಸಂಖ್ಯೆ: ಸಿಆಸುಇ 04 ಸೇಇವಿ 96, ದಿನಾಂಕ:28.08.1996.
5. ಸುತ್ತೋಲೆ ಸಂಖ್ಯೆ: ಸಿಆಸುಇ 09 ಸೇಇವಿ 98, ದಿನಾಂಕ:03.08.1998.
6. ಸುತ್ತೋಲೆ ಸಂಖ್ಯೆ: ಸಿಆಸುಇ 47 ಸೇಇವಿ 2001, ದಿನಾಂಕ:23.03.2002.
7. ಸುತ್ತೋಲೆ ಸಂಖ್ಯೆ: ಸಿಆಸುಇ 07 ಸೇಇವಿ 2003, ದಿನಾಂಕ:12.05.2003.
8. ಸುತ್ತೋಲೆ ಸಂಖ್ಯೆ: ಸಿಆಸುಇ 1 ಸೇಇವಿ 2005, ದಿನಾಂಕ:09.02.2005.

*****

ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ಅವನ ಮೇಲೆ ಹೂಡಿದ ಯಾವುದೇ ಇಲಾಖಾ ತನಿಖೆಗಳ ಬಗ್ಗೆ ಅವನು ಸೇವೆಯಿಂದ ನಿವೃತ್ತಿಯಾದ ನಂತರ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)ರ ಉಪಬಂಧಗಳಿಗೆ ಒಳಪಟ್ಟು ಇಲಾಖಾ ವಿಚಾರಣೆಯನ್ನು ಆರಂಭಿಸುವ ಮತ್ತು ಸೇವೆಯಲ್ಲಿದ್ದಾಗ ಅವನ ವಿರುದ್ದ ಆರಂಭಿಸಿರುವ ಇಲಾಖಾ ವಿಚಾರಣೆಯನ್ನು ನಿಯಮ 214(2)(ಎ)ರ ಉಪಬಂಧಗಳಿಗೆ ಒಳಪಟ್ಟು ಮುಂದುವರೆಸುವ ಅವಕಾಶವಿದೆ. ಇದರ ಹೊರತಾಗಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಲ್ಲಿರುವ ನಿಯಮಗಳ ಪ್ರಕಾರ ಹೊಸದಾಗಿ ಇಲಾಖಾ ವಿಚಾರಣೆ ಪ್ರಾರಂಭಿಸುವುದಕ್ಕೆ ಮತ್ತು ಪ್ರಾರಂಭಿಸಿರುವ ಇಲಾಖಾ ವಿಚಾರಣೆಯನ್ನು ಮುಂದುವರೆಸುವುದಕ್ಕೆ ಅವಕಾಶವಿರುವುದಿಲ್ಲ. ಕಾರಣ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು ಅಂತಹ ನಿವೃತ್ತ ನೌಕರರಿಗೆ ಅನ್ವಯಿಸುವುದಿಲ್ಲ. ಸರ್ಕಾರಿ ನೌಕರನು ನಿವೃತ್ತಿಯಾದ ನಂತರ ಅವನ ಮೇಲೆ ಹೂಡಲಾಗಿದ್ದ ಇಲಾಖಾ ತನಿಖೆಗಳನ್ನು ಸರ್ಕಾರಕ್ಕೆ ಆರ್ಥಿಕ ಹಾನಿ ಉಂಟಾಗಿಲ್ಲವೆಂಬ ಕಾರಣ ನೀಡಿ ಅವುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ಪ್ರಸ್ತಾವನೆಗಳು ಸರ್ಕಾರದ ಮುಂದೆ ಬಂದ ಸಂದರ್ಭದಲ್ಲಿ ಸರ್ಕಾರವು ಆ ಬಗ್ಗೆ ಪರಿಶೀಲಿಸಿ, ಉಲ್ಲೇಖ(1) ಮತ್ತು (2)ರ ಅಧಿಕೃತ ಜ್ಞಾಪನಗಳಲ್ಲಿ **ನಿವೃತ್ತಿ ಆಗುವಂತಹ ಸರ್ಕಾರಿ ನೌಕರರ ಮೇಲೆ ಹೂಡಲಾಗಿರುವ ಇಲಾಖಾ ತನಿಖೆಗಳನ್ನು ಅವರು ನಿವೃತ್ತಿ ಆಗುವುದಕ್ಕೆ ಮುಂಚೆ ಇತ್ಯರ್ಥ ಮಾಡುವ ಕುರಿತು ಸೂಚನೆಗಳನ್ನು ನೀಡಿದೆ.**

2) ತದನಂತರದಲ್ಲಿ ನಿವೃತ್ತಿ ಹೊಂದಿದ ಅಪಾದಿತ ಅಧಿಕಾರಿ ವಿರುದ್ದ ಇಲಾಖಾ ವಿಚಾರಣೆ ಪ್ರಾರಂಭಿಸ ಬೇಕಾದ ಪ್ರಕರಣವೊಂದರಲ್ಲಿ ಸಕಾಲದಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 214(ಬಿ)(ii)ರಲ್ಲಿ ನಿಗದಿಪಡಿಸಿದ ಕಾಲ ಮಿತಿಯೊಳಗೆ ವಿಚಾರಣೆಯನ್ನು ಪ್ರಾರಂಭಿಸಿಲ್ಲದ ಕಾರಣ ಅಪಾದಿತ ಅಧಿಕಾರಿಯ ಮೇಲೆ ಇಲಾಖಾ ವಿಚಾರಣೆ ಹೂಡಲು ಅಸಾಧ್ಯವಾದ ಪರಿಸ್ಥಿತಿ

ಉಂಟಾದುದಲ್ಲದೇ, ಆರೋಪಿ ಸರ್ಕಾರಿ ನೌಕರರು ನಿವೃತ್ತಿ ಹೊಂದುವ 2-3 ದಿನಗಳ ಮುಂಚೆ ಇಲ್ಲವೇ ಹಿಂದಿನ ದಿನ ಅವರ ದುರ್ನಡತೆಗೆ ಸಂಬಂಧಿಸಿದ ವಿವರಗಳು ನೀಡಿ ಅವರ ಮೇಲೆ ಶಿಸ್ತಿನ ಕ್ರಮ ಆರಂಭಿಸಲು ಇಲಾಖೆಗಳು ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸುತ್ತಿರುವುದು ಸಹ ಸರ್ಕಾರದ ಗಮನಕ್ಕೆ ಬಂದ ಸಂದರ್ಭದಲ್ಲಿ ಸರ್ಕಾರವು ಉಲ್ಲೇಖ(4)ರ ಸುತ್ತೋಲೆಯಲ್ಲಿ ಸರ್ಕಾರಿ ನೌಕರನ ದುರ್ನಡತೆ ಗಮನಕ್ಕೆ ಬಂದ ತಕ್ಷಣ ಶಿಸ್ತಿನ ಪ್ರಾಧಿಕಾರಕ್ಕೆ ಅದನ್ನು ತಿಳಿಸಬೇಕು. ನಿವೃತ್ತಿ ಹೊಂದಲಿರುವ ನೌಕರರ ಪ್ರಕರಣದಲ್ಲಿ ಶಿಸ್ತಿನ ಪ್ರಾಧಿಕಾರಕ್ಕೆ ಅಂತಹ ಮಾಹಿತಿ **ಸರ್ಕಾರಿ ನೌಕರನು ನಿವೃತ್ತಿ ಹೊಂದುವ ಕನಿಷ್ಠ 2 ಅಥವಾ 3 ತಿಂಗಳ ಪೂರ್ವದಲ್ಲಿ ನೀಡಿ, ಕರಡು ದೋಷಾರೋಪಣಾ ಪಟ್ಟಿ ಇತ್ಯಾದಿ, ಸಂಬಂಧಿಸಿದ ಕಾಗದ ಪತ್ರ ಮತ್ತು ದಾಖಲೆಗಳೊಡನೆ ಶಿಸ್ತು ಪ್ರಾಧಿಕಾರಿಗಳಿಗೆ ಕಳುಹಿಸುವ ಬಗ್ಗೆ** ಮತ್ತು ವಯೋ ನಿವೃತ್ತಿ ಅಂಚಿನಲ್ಲಿರುವ ಅಂತಹ ಅಪಾದಿತ ಸರ್ಕಾರಿ ನೌಕರರ **ನಿವೃತ್ತಿ ದಿನಾಂಕವನ್ನು ಕಡ್ಡಾಯವಾಗಿ ನಮೂದಿಸುವ ಬಗ್ಗೆ** ಸೂಚನೆಗಳನ್ನು ನೀಡಲಾಗಿದೆ. **ಉಲ್ಲೇಖ(5)ರ ಸುತ್ತೋಲೆಯಲ್ಲಿ ನಿವೃತ್ತಿ ಹೊಂದಲಿರುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಪ್ರಸ್ತಾವನೆಗಳನ್ನು ಸಂಬಂಧಿಸಿದ ಅಧಿಕಾರಿ ವಯೋ ನಿವೃತ್ತಿ ಹೊಂದುವ ಕನಿಷ್ಠ ಆರು ತಿಂಗಳ ಮುಂಚೆಯೇ ಕಳುಹಿಸಬೇಕೆಂದು ತಿಳಿಸಲಾಗಿದೆ**.

3) ಉಲ್ಲೇಖ (8)ರ ಸುತ್ತೋಲೆಯಲ್ಲಿ ನಿವೃತ್ತಿ ಅಂಚಿನಲ್ಲಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಪ್ರಕರಣಗಳನ್ನು ಕಳುಹಿಸುವಲ್ಲಿ ಇಲಾಖೆಗಳು ಯಾವುದೇ ವಿಳಂಬವನ್ನು ಮಾಡಬಾರದು, ಹೀಗೆ ಕೊನೆಗಳಿಗೆಯಲ್ಲಿ ಪ್ರಸ್ತಾವನೆಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕಳುಹಿಸಿದಲ್ಲಿ ಮತ್ತು ಅಂತಹ ವಿಚಾರಣೆಯು ಕಾಲಮಿತಿಯನ್ನು ಮೀರಿದ್ದಾದಲ್ಲಿ **ವಿಳಂಬಕ್ಕೆ ಜವಾಬ್ದಾರರಾದ ನೌಕರರು/ಅಧಿಕಾರಿಗಳನ್ನು ಗುರುತಿಸಿ ಅವರುಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.**

4) ಉಲ್ಲೇಖ (6)ರ ಸುತ್ತೋಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮಗಳ ಅಡಿಯಲ್ಲಿ ಆರಂಭಿಸುವ ಪ್ರತಿಯೊಂದು ಪ್ರಕರಣದಲ್ಲಿ ಆಪಾದಿತ ಸರ್ಕಾರಿ ನೌಕರನ **ವಯೋ ನಿವೃತ್ತಿ ದಿನಾಂಕ ಸೇರಿದಂತೆ** ಇತರೆ ವಿವರಗಳನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಯಾವಾಗಲೂ ಇಡತಕ್ಕದ್ದೆಂದು ಹಾಗೂ ಅದನ್ನು ಸಂಬಂಧಿಸಿದ ಪ್ರಾಧಿಕಾರಿಗಳಿಗೆ ಲಭ್ಯಮಾಡತಕ್ಕದ್ದೆಂದು ಹಾಗೂ ಈ ವಿವರಗಳನ್ನು ತಪ್ಪದೆ **ಕಡತದ ಕವಚದ ಮೇಲೆ ದಪ್ಪ ಅಕ್ಷರದಲ್ಲಿ ಕೆಂಪು ಶಾಯಿಯಲ್ಲಿ ನಮೂದಿಸಬೇಕೆಂದು ಸೂಚನೆಗಳನ್ನು ನೀಡಲಾಗಿದೆ**..

5)ಈ ರೀತಿ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿದ ಮೇಲ್ಕಂಡ ಸೂಚನೆಗಳಿದ್ದಾಗ್ಯೂ ಇತ್ತೀಚಿಗೆ ಆಡಳಿತ ಇಲಾಖೆಯೊಂದು ಆರೋಪಿತ ಸರ್ಕಾರಿ ನೌಕರನ ವಿರುದ್ಧ ಶಿಸ್ತು ಪ್ರಕರಣದ ಪೂರ್ಣ ಪ್ರಸ್ತಾವನೆಯನ್ನು ಶಿಸ್ತು ಪ್ರಾಧಿಕಾರಕ್ಕೆ ಆ ಅಧಿಕಾರಿ ನಿವೃತ್ತಿ ಹೊಂದುವ ಒಂದು ವಾರದ ಮುಂಚೆ ಕಳುಹಿರುವುದರಿಂದ, ಅಂತಹ ಆರೋಪಿತ ಅಧಿಕಾರಿ ವಿರುದ್ಧ ಕ್ರಮ ಜರುಗಿಸಲು ಅವಕಾಶವಿಲ್ಲದಂತಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

**(1)ಆದುದರಿಂದ, ನಿವೃತ್ತಿ ಹೊಂದಲಿರುವ ಅಧಿಕಾರಿ/ನೌಕರರ ವಿರುದ್ಧದ ಶಿಸ್ತು ಕ್ರಮದ ಪರಿಪೂರ್ಣ ಪ್ರಸ್ತಾವನೆಗಳನ್ನು ಆಡಳಿತ ಇಲಾಖೆಗಳು ಅಂತಹ ಅಧಿಕಾರಿ/ನೌಕರರು ನಿವೃತ್ತರಾಗುವ ಕನಿಷ್ಠ 30 ದಿನಗಳ ಮುಂಚೆ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.**

**(2) ಕಡತದ ಕವಚದ ಮೇಲೆ ದಪ್ಪ ಅಕ್ಷರಗಳಲ್ಲಿ ಕೆಂಪು ಶಾಹಿಯಲ್ಲಿ ಅಪಾದಿತ ಸರ್ಕಾರಿ ನೌಕರರ ವಯೋ ನಿವೃತ್ತಿ ದಿನಾಂಕ ನಮೂದಿಸತಕ್ಕದ್ದು.**

**(3)ಮೇಲಿನ ಕಾಲಮಿತಿ ಮೀರಿದ್ದಾದಲ್ಲಿ ವಿಳಂಬಕ್ಕೆ ಜವಾಬ್ದಾರರಾದ ನೌಕರರು/ ಅಧಿಕಾರಿಗಳನ್ನು ಗುರುತಿಸಿ ಅವರುಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸತಕ್ಕದ್ದು. ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.**

**(ಟಿ.ಎಂ.ವಿಜಯಭಾಸ್ಕರ್)**
ಸರ್ಕಾರದಮುಖ್ಯಕಾರ್ಯದರ್ಶಿ